# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಗಣಪತಿ.ಎಸ್.ಸಾಕರೆ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ,ದೇವದುರ್ಗ ಇವರ ವಿರುದ್ಧದ ಲೋಕಾಯುಕ್ತ ಪ್ರಕರಣ – ಮಾನ್ಯ ಕೆ.ಎ.ಟಿ.ಯ ಅರ್ಜಿಸಂಖ್ಯೆ:2320/2017ರಲ್ಲಿ ನೀಡಿರುವ ಆದೇಶ ದಿನಾಂಕ:26.06.2017 ರಂತೆ ಇಲಾಖಾ ವಿಚಾರಣೆ ಕೈಬಿಡುವ ಬಗ್ಗೆ – ಆದೇಶ

**ಓದಲಾಗಿದೆ:-**

1. ಮಾನ್ಯ ಉಪಲೋಕಾಯುಕ್ತ ರವರ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ವರದಿ ಸಂಖ್ಯೆ: Compt/uplok/GIB /63/2008/ARE-4, ದಿ:05.08.2016
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 88 ಇಎನ್ಕ್ಯೂ 2016, ದಿನಾಂಕ:07.09.2016
3. ಮಾನ್ಯ ಕೆ.ಎ.ಟಿ. ಅರ್ಜಿ ಸಂಖ್ಯೆ: 2320/2017 ಕ್ಕೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಮಂಡಳಿಯು ನೀಡಿರುವ ಆದೇಶ ದಿನಾಂಕ:26.06.2019
4. ಸರ್ಕಾರಿ ಸರ್ಕಾರಿ ವಕೀಲರು, ಕೆ.ಎ.ಟಿ, ಇವರ ಪತ್ರಸಂಖ್ಯೆ:2957/AG/KSAT ದಿನಾಂಕ: 08.08.2019

* * * *

**ಪ್ರಸ್ತಾವನೆ:**

ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ದೊಂಡಂಬಳಿ ಗ್ರಾಮ ಪಂಚಾಯತಿಯ ಗುಂಡಗುರ್ತಿ ಗ್ರಾಮದ ವ್ಯಾಪ್ತಿಯಲ್ಲಿ ಯಾವುದೇ ಕೆರೆ ಇಲ್ಲದೇ ಇದ್ದರೂ ಸಹ 2006-07ನೇ ಸಾಲಿನಲ್ಲಿ ರೂ.4.00 ಲಕ್ಷ ವೆಚ್ಚದಲ್ಲಿ ಅಂದಾಜು ಪಟ್ಟಿ ತಯಾರಿಸಿ, ಕೈಗೊಳ್ಳಲಾದ ಕೆರೆ ಹೂಳೆತ್ತುವ ಕಾಮಗಾರಿಯನ್ನು ಮಾಡಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ದಾಖಲಿಸಿ, ಅನುದಾನವನ್ನು ಬಿಡುಗಡೆ ಮಾಡಿ, ಹಣವನ್ನು ದುರುಪಯೋಗಪಡಿಸಿಕೊಂಡು ಅವ್ಯವಹಾರ ಎಸಗಿರುತ್ತಾರೆಂದು ಲೋಕಾಯುಕ್ತ ಕಛೇರಿಯಲ್ಲಿ ಶ್ರೀ ಅಯ್ಯಪ್ಪ ಹೊಸಮನಿ ಎಂಬುವವರು ನೀಡಿದ ದೂರಿನ ಕುರಿತು ಕರ್ನಾಟಕ ಲೋಕಾಯುಕ್ತ ಕಛೇರಿಯು ತನಿಖೆ ನಡೆಸಿ ಸದರಿ ಕಾಮಗಾರಿಯಲ್ಲಿ ಹಣ ದುರುಪಯೋಗವಾಗಿರುವುದು ಕಂಡುಬಂದ ಹಿನ್ನಲೆಯಲ್ಲಿ ಇದಕ್ಕೆ ಕಾರಣರಾದ ಶ್ರೀ ಗಣಪತಿ.ಎಸ್.ಸಾಕರೆ, ಹಿಂದಿನ ಸ.ಕಾ.ಇಂ., ಪಂ.ರಾ.ಇಂ. ಉಪವಿಭಾಗ, ದೇವದುರ್ಗ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಲೋಕಾಯುಕ್ತ ಸಂಸ್ಥೆಗೆ ವಹಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ: 05.08.2016 ರ ವರದಿಯಲ್ಲಿ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ದಿನಾಂಕ:05.08.2016 ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿ, ಸದರಿ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಶ್ರೀ ಗಣಪತಿ.ಎಸ್.ಸಾಕರೆ, ಹಿಂದಿನ ಸ.ಕಾ.ಇಂ. ಇವರ ವಿರುದ್ಧ ಆರೋಪಗಳ ಕುರಿತು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:07.09.2016 ರ ಆದೇಶದಲ್ಲಿ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿತ್ತು.ಅದರನ್ವಯ ಲೋಕಾಯುಕ್ತ ಕಛೇರಿಯು ಸದರಿ ಅಧಿಕಾರಿಗೆ ದಿನಾಂಕ:07.11.2016 ರಂದು ದೋಷಾರೋಪಣಾ ಪಟ್ಟಿಯನ್ನು ಸಹ ಜಾರಿ ಮಾಡಿರುತ್ತದೆ.

ಶ್ರೀ ಗಣಪತಿ.ಎಸ್.ಸಾಕರೆ ಇವರು ಮೇಲ್ಕಂಡ ಸರ್ಕಾರದ ಆದೇಶ ಮತ್ತು ಲೋಕಾಯುಕ್ತ ಕಚೇರಿಯಿಂದ ಜಾರಿ ಮಾಡಿದ ದೋಷಾರೋಪಣಾ ಪಟ್ಟಿಯನ್ನು ಪ್ರಶ್ನಿಸಿ ಮಾನ್ಯ

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:2320/2017 ಅನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಮಂಡಳಿಯು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ:26.06.2019 ರ ಅಂತಿಮ ಆದೇಶದಲ್ಲಿ ಸರ್ಕಾರದ ದಿನಾಂಕ:07.09.2016 ರ ಆದೇಶ ಮತ್ತು ಲೋಕಾಯುಕ್ತ ಕಛೇರಿಯು ದಿನಾಂಕ:07.11.2016 ರಂದು ಜಾರಿ ಮಾಡಿದ ದೋಷಾರೋಪಣಾ ಪಟ್ಟಿಯನ್ನು ರದ್ದುಪಡಿಸಿರುತ್ತದೆ.

ಈ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಮೇಲ್ಕಂಡಂತೆ ತೀರ್ಪು ನೀಡಲು ಪ್ರಮುಖವಾಗಿ ಪರಿಗಣಿಸಿರುವ ಅಂಶಗಳೆಂದರೆ, 2006-07ನೇ ಸಾಲಿಗೆ ಸಂಬಂಧಿಸಿದ ದೂರು ಅರ್ಜಿಯ ಬಗ್ಗೆ 8 ವರ್ಷ 9 ತಿಂಗಳು ಗತಿಸಿದ ನಂತರ ಇಲಾಖಾ ವಿಚಾರಣೆ ಕೈಗೊಂಡಿರುವ ಕ್ರಮದ ಸಮರ್ಥನೆ ಕುರಿತು ಸಮರ್ಪಕವಾಗಿ ವಿವರಣೆ ನೀಡಿಲ್ಲವೆಂದು ಹಾಗೂ ದೂರುದಾರರು ಶ್ರೀ ಎನ್.ಕೆ.ಹೊಳೆಯಣ್ಣನವರ, ಅಂದಿನ ಕಾ.ಇಂ. ರವರ ವಿರುದ್ಧ ದೂರು ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಶ್ರೀ ಗಣಪತಿ.ಎಸ್.ಸಾಕರೆ ಇವರ ಹೆಸರು ಇರುವುದಿಲ್ಲವೆಂದು, ಈ ಅಂಶಗಳನ್ನು ಇಲಾಖಾ ವಿಚಾರಣೆ ಕೈಗೊಳ್ಳುವ ಪೂರ್ವದಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳು ಪರಿಗಣಿಸಿರುವುದಿಲ್ಲವೆಂಬ ಕಾರಣಕ್ಕಾಗಿ ಸರ್ಕಾರದ ಆದೇಶ ಹಾಗೂ ದೋಷಾರೋಪಣಾ ಪಟ್ಟಿಗಳನ್ನು ರದ್ದುಪಡಿಸಿರುತ್ತದೆ.

ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ಮಂಡಳಿ, ಬೆಂಗಳೂರು ಪೀಠ ರವರು ಮೇಲೆ ಓದಲಾದ ಕ್ರ.ಸಂ.(4) ರ ದಿನಾಂಕ:21.08.2019 ರ ಪತ್ರದಲ್ಲಿ ಮಾನ್ಯ ಕರ್ನಾಟಕ ಆಡಳಿತ ಮಂಡಳಿ ಬೆಂಗಳೂರು ಪೀಠವು ಅರ್ಜಿ ಸಂಖ್ಯೆ:2320/2017 ರಲ್ಲಿ ದಿನಾಂಕ:26.06.2019 ರಂದು ನೀಡಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಾಗಿರುವುದಿಲ್ಲ ಎಂದು ಅಭಿಪ್ರಾಯ ನೀಡಿರುತ್ತಾರೆ.

ಸರ್ಕಾರವು ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು, ಮಾನ್ಯ ಕರ್ನಾಟಕ ಆಡಳಿತ ಮಂಡಳಿ ಬೆಂಗಳೂರು ಪೀಠದ ದಿನಾಂಕ:06.08.2019 ರ ಆದೇಶ ಹಾಗೂ ಸರ್ಕಾರಿ ವಕೀಲರ ಅಭಿಪ್ರಾಯವನ್ನು ಪರಿಶೀಲಿಸಿರುತ್ತದೆ. ಈ ಪ್ರಕರಣದಲ್ಲಿ ಪ್ರಮುಖವಾಗಿ ಶ್ರೀ ಅಯ್ಯಪ್ಪ ಹೊಸಮನಿ ಎಂಬುವವರು ದಿನಾಂಕ:29.02.2008 ರಂದು ಮಾನ್ಯ ಲೋಕಾಯುಕ್ತ ಕಛೇರಿಯಲ್ಲಿ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ ದೂರು ಅರ್ಜಿಯ ಬಗ್ಗೆ ಕ್ರಮ ಕೈಗೊಳ್ಳುವಲ್ಲಿ ವಿಳಂಬವಾಗಿದ್ದು, ಅಂತಿಮವಾಗಿ ಸರ್ಕಾರಕ್ಕೆ ವರದಿಯನ್ನು ದಿನಾಂಕ:06.08.2016 ರಂದು ಸಲ್ಲಿಸಲಾಗಿದೆ. ಇದಕ್ಕೂ ಪೂರ್ವದಲ್ಲಿ ಲೋಕಾಯುಕ್ತ ಕಛೇರಿಯು ಪ್ರಶ್ನಿತ ಕಾಮಗಾರಿಯ ತಪಾಸಣೆ ನಡೆಸುವ ಸಂಬಂಧ ಪರಿಶೀಲಿಸಲಾಗಿದ್ದರೂ ಸಹ ಕಾಮಗಾರಿಗಳ ದಾಖಲೆಗಳನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಸಲ್ಲಿಸದಿರುವುದು ಹಾಗೂ ಅಂತಿಮವಾಗಿ ಲೋಕಾಯುಕ್ತ ಕಛೇರಿಯು ಕಾರ್ಯಪಾಲಕ ಅಭಿಯಂತರರು ಸಲ್ಲಿಸಿದ ಅಪೂರ್ಣ ದಾಖಲೆಗಳ ಆಧಾರದ ಮೇಲೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆಂದು ಪರಿಗಣಿಸಿ ಸರ್ಕಾರದ ಅದೇಶ ಹಾಗೂ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ರದ್ದುಪಡಿಸಿರುತ್ತದೆ.

ಈ ಪ್ರಕರಣವು ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಾಗಿರುವುದಿಲ್ಲವೆಂದು ಸರ್ಕಾರಿ ವಕೀಲರು ಅಭಿಪ್ರಾಯಿಸಿರುತ್ತಾರೆ. ಈ ಪ್ರಕರಣದಲ್ಲಿ ಮಾನ್ಯ ಕೆ.ಎ.ಟಿ.ಯು ದಿನಾಂಕ:26.06.2019 ರಂದು ಆದೇಶ ನೀಡಿದ್ದು, ಈಗಾಗಲೇ ಎರಡುವರೆ ವರ್ಷಗಳಿಗೂ ಹೆಚ್ಚಿನ ಅವಧಿ ಗತಿಸಿರುತ್ತದೆ. ಕರ್ನಾಟಕ ಆಡಳಿತ ಮಂಡಳಿಯು ಹೊರಡಿಸಿರುವ ಆದೇಶದಲ್ಲಿ ಯಾವುದೇ ಆಕ್ಷೇಪಾರ್ಹ ಅಂಶಗಳು ಕಂಡುಬರುವುದಿಲ್ಲ. ಹಾಗಾಗಿ ಸರ್ಕಾರಿ ವಕೀಲರು ನೀಡಿರುವ ಅಭಿಪ್ರಾಯ ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 2320/2017 ರಲ್ಲಿ ದಿನಾಂಕ: 26.06.2019 ರಂದು ನೀಡಿರುವ ಆದೇಶವನ್ನು ಒಪ್ಪಿ, ಮಾನ್ಯ ಕೆ.ಎ.ಟಿ.ಯ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಲೋಕಾಯುಕ್ತ ಕಛೇರಿಯು ಸಲ್ಲಿಸುವ ಮೇಲ್ಮನವಿಯಲ್ಲಿನ ತೀರ್ಮಾನಕ್ಕೆ

ಒಳಪಟ್ಟು ಪ್ರಕರಣವನ್ನು ಪುನರ್ ಪರಿಶೀಲಿಸುವ ಷರತ್ತಿನೊಂದಿಗೆ ಶ್ರೀ ಗಣಪತಿ.ಎಸ್.ಸಾಕರೆ, ಹಿಂದಿನ ಸ.ಕಾ.ಇಂ., ಪಂ.ರಾ.ಇಂ. ಉಪವಿಭಾಗ, ದೇವದುರ್ಗ ಇವರ ವಿರುದ್ಧದ ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 249 ಜಿಪಅ 2017,**
**ಬೆಂಗಳೂರು ದಿನಾಂಕ : 28.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:2320/2017 ರಲ್ಲಿ ದಿನಾಂಕ:26.06.2019 ರಂದು ನೀಡಿರುವ ಆದೇಶದ ಅನುಸಾರ ಶ್ರೀ ಗಣಪತಿ.ಎಸ್.ಸಾಕರೆ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್. ಉಪವಿಭಾಗ,ದೇವದುರ್ಗ ಇವರ ವಿರುದ್ಧದ ಇಲಾಖಾ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸಲಾಗಿದ್ದ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 88 ಇಎನ್‌ಕ್ಯೂ 2019 ದಿನಾಂಕ:07.09.2016 ರ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಲೋಕಾಯುಕ್ತ ಕಛೇರಿಯು ಸಲ್ಲಿಸುವ ಮೇಲ್ಮನವಿ ಅರ್ಜಿಯಲ್ಲಿನ ಆದೇಶಕ್ಕೆ ಒಳಪಟ್ಟು, ಈ ಪ್ರಕರಣವನ್ನು ಪುನರ್ ಪರಿಶೀಲಿಸುವ ಷರತ್ತಿಗೆ ಒಳಪಟ್ಟು ರದ್ದುಪಡಿಸಿ ಈ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಅನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ. ನದೀಮ್ 28/3

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1.ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಲೋಕೋಪಯೋಗಿ, ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು ವಿಕಾಸಸೌಧ.ಬೆಂಗಳೂರು
3. ಮಾನ್ಯಉಪಲೋಕಾಯುಕ್ತರು, ಕರ್ನಾಟಕಲೋಕಾಯುಕ್ತ, ಬಹುಮಹಡಿಗಳಕಟ್ಟಡ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5.ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು.
6.ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು
7.ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಬಿ & ಸಿ)
8. ಶ್ರೀ ಗಣಪತಿ.ಎಸ್.ಸಾಕರೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ,ರಾಯಚೂರು.

ಪ್ರತಿ ಮಾಹಿತಿಗಾಗಿ:

1.ಮಾನ್ಯ ಗ್ರಾ.ಅ.ಪಂ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
2.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3.ಸರ್ಕಾರದ ಜಂಟಿ ಕಾರ್ಯದರ್ಶಿಗಳು, (ಆಡಳಿತ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ
4.ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲು.